# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂ: 128/2019

**ಫಿರ್ಯಾದುದಾರರು:** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರು:** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರು:** | ಗಂಗಾ | ಫ್ರಾಸಾ: | 05 |
| **ಗಂಡನ ಹೆಸರು:** | ನರೇಶ್ ಬಾಬು | ಚಾಸಾ: | 09 |
| **ವಯಸ್ಸು:** | 29 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 06.04.2024 |
| **ಉದ್ಯೋಗ:** | ಶಿಕ್ಷಕಿ | | |
| **ವಾಸ ಸ್ಥಳ:** | ಪಾತಕೋಟೆ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು. | | |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:

ಫ್ರಾ.ಸಾ.1 ನನ್ನ ಚಿಕ್ಕಪ್ಪ. ಫ್ರಾ.ಸಾ.2 ರವರು ನನಗೆ ಗೊತ್ತು. ಫ್ರಾ.ಸಾ.3 ರವರು ನನಗೆ ಗೊತ್ತಿಲ್ಲ. ಚಾ.ಸಾ.4 ನನ್ನ ಮಾವ. ಚಾ.ಸಾ.5 ರವರು ನನಗೆ ಗೊತ್ತಿಲ್ಲ. ಚಾ.ಸಾ.8 ರವರು ನನ್ನ ತಾಯಿ. ಮೃತ ಕವಿತಾ ನನ್ನ ಅಕ್ಕ. ಚಾ.ಸಾ.11 ನನ್ನ ಗಂಡ. ಚಾ.ಸಾ.10 ನನ್ನ ಭಾವ. ಚಾ.ಸಾ.7 ರವರು ನನಗೆ ಗೊತ್ತಿಲ್ಲ. ಗಂಗಾಧರಯ್ಯ ನನ್ನ ಭಾವ. ಗಂಗಾಧರ ಮತ್ತು ಕವಿತಾರವರಿಗೆ 3 ಜನ ಹೆಣ್ಣು ಮಕ್ಕಳು. ಸದರಿಯವರು

ಚಿಂತಾಮಣಿ ನಗರದ ಶ್ರೀರಾಮನಗರದಲ್ಲಿ ವಾಸವಿದ್ದರು.

2) ದಿನಾಂಕಃ26.01.2019 ರಂದು ಕವಿತಾರವರು ನಿಧನ ಹೊಂದಿರುತ್ತಾರೆ. ದಿನಾಂಕಃ25.01.2019 ರಂದು ನಾನು ಪಾತಕೋಟೆ ಊರಿನಲ್ಲಿದ್ದಾಗ ನನ್ನ ಭಾವ ಗಂಗಾಧರ್ ನನಗೆ ಪೋನ್ ಮಾಡಿ ನನ್ನ ಅಕ್ಕ ಪ್ರಸಾದ ಸೇವಿಸಿ ಅಸ್ವಸ್ತಗೊಂಡಿದ್ದಾಳೆ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ ಎಂದು ತಿಳಿಸಿದರು. ನಂತರ ಅದೇ ದಿನ ನಾವು ಸಂಜೆ 7.30-8.00 ಗಂಟೆ ಸಮಯಕ್ಕೆ ಆಸ್ಪತ್ರೆಗೆ ಬಂದೆವು. ಅಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ವೈದ್ಯರು ಹೇಳಿದ್ದರಿಂದ ನನ್ನ ಅಕ್ಕ ಕವಿತಾಳನ್ನು ಆರ್.ಎಲ್.ಜಾಲಪ್ಪ ಆಸ್ಪತ್ರೆ ಕೋಲಾರಕ್ಕೆ ಕರೆದುಕೊಂಡು ಹೋದೆವು. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನನ್ನ ಅಕ್ಕ ನಿಧನ ಹೊಂದಿದ್ದಳು. ಅಲ್ಲಿ ವೈದ್ಯರು ವಿಷ ಸೇವನೆ ಮಾಡಿದ್ದರಿಂದ ನನ್ನ ಅಕ್ಕ ನಿಧನ ಹೊಂದಿದ್ದಳು ಎಂದು ವರದಿ ನೀಡಿದರು. ಆ ಬಗ್ಗೆ ಪೋಲಿಸರಿಗೆ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ06.04.2024
ಸ್ಥಳಃ ಚಿಂತಾಮಣಿ

**(ನಾಗವೇಣಿ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.